# ಕನ್ನಡ ಭಾಷಾ ಪರೀಕ್ಷೆ-2013

| ದಿನಾಂಕ | ವಿಷಯ | ಸಮಯ |
|---|---|---|
| 03-05-2013 | ಕನ್ನಡ ಭಾಷೆ | ಬೆ.10.30 ರಿಂದ 11.30 ರವರೆಗೆ |
| | | |
| ಗರಿಷ್ಠ ಅಂಕಗಳು<br>50 | ಒಟ್ಟು ಅವಧಿ<br>70 ನಿಮಿಷಗಳು | ಉತ್ತರಿಸಲು ಇರುವ ಗರಿಷ್ಠ ಅವಧಿ<br>60 ನಿಮಿಷಗಳು |

| ನಿಮ್ಮ ಸಿ.ಇ.ಟಿ.(C.E.T) ಸಂಖ್ಯೆಯನ್ನು ಬರೆಯಿರಿ | | | | | | ವರ್ಷನ್ ಕೋಡ್ | ಪ್ರಶ್ನೆಪತ್ರಿಕೆಯ ಕ್ರಮ ಸಂಖ್ಯೆ |
|---|---|---|---|---|---|---|---|
| | | | | | | A4 | 0734 |

| ಜನನ ದಿನಾಂಕ | | | | | | | |
|---|---|---|---|---|---|---|---|
| | | | | | | | |

## ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. ಅಭ್ಯರ್ಥಿಗಳು ನೋಂದಣಿ ಸಂಖ್ಯೆಯನ್ನು ಈ ಉತ್ತರಪತ್ರಿಕೆಯಲ್ಲಿ ಬರೆದಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ.
2. ಪ್ರತಿ ಪ್ರಶ್ನೆಯ ಕೆಳಭಾಗದಲ್ಲಿ ಅಭ್ಯರ್ಥಿಗಳು ಉತ್ತರಿಸಬೇಕಾಗಿರುವುದರಿಂದ ಈ ಪತ್ರಿಕೆಯು, ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಒಳಗೊಂಡಿರುತ್ತದೆ.
3. ದಯವಿಟ್ಟು ಬಾಲ್ ಪಾಯಿಂಟ್ ಪೆನ್ನನ್ನೇ ಉಪಯೋಗಿಸಿ ಸ್ಪಷ್ಟವಾಗಿ ಉತ್ತರ ಬರೆಯಿರಿ.
4. ಈ ಪ್ರಶ್ನೆ ಪತ್ರಿಕೆಯನ್ನೊಳಗೊಂಡ ಉತ್ತರ ಪತ್ರಿಕೆಯನ್ನು ನಿಮಗೆ 2ನೇ ಬೆಲ್ ಅಂದರೆ ಬೆ. 10.25 ಆದ ನಂತರ ಕೊಡಲಾಗುವುದು.
5. ಮೂರನೇ ಬೆಲ್ ಬೆ.10.30ಕ್ಕೆ ಆಗುತ್ತದೆ. ಅಲ್ಲಿಯವರೆಗೂ,
   * ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಪಿನ್ ಅನ್ನು ತೆಗೆಯಬಾರದು.
   * ಪ್ರಶ್ನೆಪತ್ರಿಕೆಯ ಒಳಗಡೆ ಇರುವ ಪ್ರಶ್ನೆಗಳನ್ನು ನೋಡಲು ಪ್ರಯತ್ನಿಸಬಾರದು.
   * ಈ ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸಬಾರದು.
6. ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 10 ಮುಖ್ಯ ಪ್ರಶ್ನೆಗಳಿರುತ್ತವೆ.
7. ಕೊನೆಯ ಬೆಲ್ ಅಂದರೆ ಬೆ. 11.30 ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ. ನಿಮ್ಮ ಎಡಗೈ ಹೆಬ್ಬೆರಳ ಗುರುತನ್ನು ನಿಗದಿತ ಜಾಗದಲ್ಲಿ ಹಾಕಿ.
8. ಈ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.
9. ಈ ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಅಭ್ಯರ್ಥಿಯು ಸಹಿ ಮಾಡಬೇಕು.

| ಅಭ್ಯರ್ಥಿಯ ಸಹಿ<br>ದಿನಾಂಕ | ಅಭ್ಯರ್ಥಿಯ ಎಡಗೈ<br>ಹೆಬ್ಬೆರಳ ಗುರುತು | ಕೊಠಡಿ ಮೇಲ್ವಿಚಾರಕರ ಸಹಿ |
|---|---|---|

I. ಕೆಳಗಿನ ಪದಗಳಲ್ಲಿ ಯಾವುದಾದರೂ **ಐದು(5)** ಪದಗಳಿಗೆ **ಇಂಗ್ಲೀಷ್‌ನಲ್ಲಿ** ಸಮಾನಾಂತರ ಪದಗಳನ್ನು ಬರೆಯಿರಿ. (1X5=5)

1) ಪರಿಸರ ______________
2) ಕಾರ್ಯಕ್ರಮ ______________
3) ಅರಮನೆ ______________
4) ಹೆದ್ದಾರಿ ______________
5) ಧ್ವಜ ______________
6) ಸಮವಸ್ತ್ರ ______________
7) ಜ್ಞಾನ ______________
8) ಅಂಚೆ, ______________

II. ಕೆಳಗಿನ ಪದಗಳಲ್ಲಿ ಯಾವುದಾದರೂ **ಐದು(5)** ಪದಗಳಿಗೆ **ಕನ್ನಡದಲ್ಲಿ** ಸಮಾನಾಂತರ ಪದಗಳನ್ನು ಬರೆಯಿರಿ.

(1X5=5)

1) Wealth ______________
2) Television ______________
3) Story ______________
4) Wealth ______________
5) Experience ______________
6) Cow ______________
7) Sea ______________
8) Vegitable ______________

III . **ಐದು(5)** ಪದಗಳನ್ನು **ಮಾತ್ರ** ತಪ್ಪಿದ್ದರೆ ತಿದ್ದಿ ಬರೆಯಿರಿ. (1X5=5)

1) ಸಮದಾನ ______________
2) ಪರಿಶಮ ______________
3) ಆಸಕಿ ______________
4) ಆಕಷಣೆ ______________
5) ಗಳತಿ ______________
6) ಕರುಣಾಜನಕ ______________
7) ವವಹಾರ ______________
8) ಮಂದಸಿತ ______________

IV. ಐದನ್ನು(5) ಕನ್ನಡಕ್ಕೆ ಅನುವಾದಿಸಿ. (1X5=5)

1) Kangaroo is the National Symbol of Australia

______________________________

2) Europe is the birth place of modern Industry

______________________________

3) Sun is the natural source of heat and light.

______________________________

4) 'Work is worship' was the main slogan of Basavanna.

______________________________

5) Rani Chennamma was the famous heroic queen of Kittur

______________________________

6) K.C. Reddy was the first Chief Minister of Karnataka.

______________________________

7) Eating too much is bad.

______________________________

V. ಈ ಕೆಳಗಿನ ವಾಕ್ಯಗಳಲ್ಲಿ ಐದನ್ನು (5) ಮಾತ್ರ ತಪ್ಪಿದ್ದರೆ ತಿದ್ದಿ ಬರೆಯಿರಿ. (1X5=5)

1) ತರಗತಿಗಳು ನಾಳೆಯಿಂದ ಪ್ರಾರಂಭವಾದವು.

______________________________

2) ಗುರುಹಿರಿಯರನ್ನು ಅಗೌರವಿಸಬೇಕು.

______________________________

3) ಸಭೆಯಲ್ಲಿ ಹೆಚ್ಚು ಜನರು ಸೇರಿದ್ದನು.

______________________________

4) ರಮೇಶನು ಅಡುಗೆಯನ್ನು ಚೆನ್ನಾಗಿ ಮಾಡುತ್ತಾಳೆ.

______________________________

5) ಕಬಡ್ಡಿ ಒಳಾಂಗಣ ಆಟ

______________________________

6) ಭಾರತದ ಈಗಿನ ರಾಷ್ಟ್ರಪತಿ ಡಾ: ಮನಮೋಹನ್‌ಸಿಂಗ್

______________________________

7) ಒಂದು ವಾರಕ್ಕೆ 30 ದಿನಗಳು

______________________________

VI. ಯಾವುದಾದರು(5) **ಐದು** ಪ್ರಶ್ನೆಗಳಿಗೆ **ಒಂದು** ಪದ/ಒಂದು ವಾಕ್ಯದಲ್ಲಿ ಉತ್ತರಿಸಿ. (1X5=5)

1) ಭಾರತಕ್ಕೆ ಸ್ವಾತಂತ್ರ್ಯ ಬಂದ ವರ್ಷ ಯಾವುದು?

______________________________

2) 'ಮೈಸೂರಿನ ಹುಲಿ' ಎಂದು ಯಾರನ್ನು ಕರೆಯುತ್ತಿದ್ದರು?

______________________________

3) ಚಿತ್ರದುರ್ಗದ ವೀರ ಮಹಿಳೆ ಯಾರು?

______________________________

4) 'ರಾಮಾಯಣ ದರ್ಶನಂ' ಗ್ರಂಥವನ್ನು ರಚಿಸಿದವರು ಯಾರು?

______________________________

5) ಬ್ರಹ್ಮ ಸಮಾಜದ ಸಂಸ್ಥಾಪಕರಾರು?

______________________________

6) ವಿಶ್ವವಿಖ್ಯಾತ 'ಗೋಲ್ ಗುಂಬಜ್' ಎಲ್ಲಿದೆ?

______________________________

7) ಒಂದು ವರ್ಷದಲ್ಲಿ ಎಷ್ಟು ತಿಂಗಳುಗಳಿವೆ?

______________________________

VII. ಕೆಳಗಿನ ಯಾವುದಾದರೂ **ಒಂದು** ವಿಷಯದಲ್ಲಿ **ಐದು(5) ವಾಕ್ಯಗಳ** ಪುಟ್ಟ ಪ್ರಬಂಧ ಬರೆಯಿರಿ. (1X5=5)

1) ನನ್ನ ಬಯಕೆ

2) ಪ್ರವಾಸ

3) ರಾಷ್ಟ್ರಪ್ರೇಮ

4) ದಿನಪತ್ರಿಕೆ

5) ಸಹಕಾರ

____________________________________________

____________________________________________

____________________________________________

____________________________________________

____________________________________________

____________________________________________

VIII. ಮಾದರಿಯಲ್ಲಿ ಸೂಚಿಸಿದಂತೆ ಐದು(5) ಪದಗಳಿಗೆ ಪದ ರಚಿಸಿ ಬರೆಯಿರಿ. (1X5=5)

ಬೇಕು-ಬೇಡ

1) ಸಮರ್ಥ ____________________

2) ರಾಣಿ ____________________

3) ಅಧಿಕೃತ ____________________

4) ಸತ್ಯ ____________________

5) ಚಿಕ್ಕದು ____________________

IX. ಗುಂಪಿಗೆ ಸೇರದ ಪದ ಬರೆಯಿರಿ. (1X5=5)

1) ಕಂಚು, ಹಿತ್ತಾಳೆ, ವಜ್ರ, ತಾಮ್ರ.

______________________________________

2) ಜೇನು, ಹಾಲು, ನೀರು, ಮರ.

______________________________________

3) ರಾಷ್ಟ್ರಪಿತ, ಲಂಡನ್, ಪ್ಯಾರಿಸ್, ವಾಷಿಂಗ್‌ಟನ್.

______________________________________

4) ಚಳಿಗಾಲ, ಭೂತಕಾಲ, ಮಳೆಗಾಲ, ಬೇಸಿಗೆ ಕಾಲ.

______________________________________

5) ಗಾಂಧಿಜಯಂತಿ, ವೈಜಯಂತಿ, ಬಸವಜಯಂತಿ, ಮಹಾವೀರ ಜಯಂತಿ.

______________________________________

X. ಈ ಪ್ರಬಂಧವನ್ನು ಓದಿಕೊಂಡು ಈ ಕೆಳಗಿನ ಐದು ಪ್ರಶ್ನೆಗಳಿಗೆ ಉತ್ತರಿಸಿ. (1X5=5)

ಸುಭಾಸ್‌ಚಂದ್ರ ಬೋಸ್ ಕ್ರಿ.ಶ.1897ನೇ ಜನವರಿ 23 ರಂದು ಒರಿಸ್ಸಾ ಪ್ರಾಂತ್ಯದ ಕಟಕ್ ನಗರದಲ್ಲಿ ಜನಿಸಿದರು. ತಂದೆ ವಕೀಲ ವೃತ್ತಿಯಲ್ಲಿ ಹೆಸರಾಗಿದ್ದ ಶ್ರೀ ಜಾನಕಿನಾಥ ಬೋಸರು. ತಾಯಿ ಪ್ರಭಾವತಿದೇವಿ. ಶುದ್ಧ ಬಂಗಾಳಿ ಮಧ್ಯಮ ವರ್ಗದ ಈ ದಂಪತಿಗಳ 14 ಮಕ್ಕಳಲ್ಲಿ ಸುಭಾಸರು 6ನೆಯುವರು. ಸುಭಾಸರ ತಂದೆ ಆತ್ಮಾಭಿಮಾನಿ ಹಾಗೂ ನಿಸ್ಪೃಹರು. ಯಾವುದೋ ವ್ಯವಹಾರದಲ್ಲಿ ಮೆಜಿಸ್ಟ್ರೇಟರಿಗೂ ಅವರಿಗೂ ಮನಸ್ತಾಪ ಬಂದು ವಕೀಲ ವೃತ್ತಿಗೆ ರಾಜೀನಾಮೆ ನೀಡಿ ಕಲ್ಕತ್ತೆಗೆ ಹೊರಟುಹೋದರು. 'ರಾಯಬಹದ್ದೂರ್' ಬಿರುದನ್ನು ತ್ಯಜಿಸಿಬಿಟ್ಟರು. ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ದಾನಧರ್ಮ ಹಾಗೂ ದೀನದಲಿತರ ಸೇವೆಗೆ ಹೆಸರಾಗಿದ್ದರು. ಅಂತಹ ತಂದೆಗೆ ಹೆಮ್ಮೆಯ ಪುತ್ರನಾಗಿ ಸುಭಾಸ್ ಜನಿಸಿದ್ದರು.

1) ಸುಭಾಸ್‌ಚಂದ್ರ ಬೋಸರು ಅವರ ತಂದೆತಾಯಿಗೆ ಎಷ್ಟನೆ ಮಗ ?

______________________________

2) ಶ್ರೀ ಜಾನಕಿನಾಥ ಬೋಸರ ವೃತ್ತಿ ಯಾವುದು?

______________________________

3) ಸುಭಾಸ್‌ಚಂದ್ರ ಬೋಸರ ತಂದೆ ಯಾವ ಬಿರುದನ್ನು ತ್ಯಜಿಸಿದರು?

______________________________

4) ಸುಭಾಸ್‌ಚಂದ್ರ ಬೋಸರು ಒರಿಸ್ಸಾ ಪ್ರಾಂತ್ಯದ ಯಾವ ನಗರದಲ್ಲಿ ಜನಿಸಿದರು?

______________________________

5) ಸುಭಾಸ್‌ಚಂದ್ರ ಬೋಸರ ತಾಯಿಯ ಹೆಸರೇನು?

______________________________